ಅ) ರೈತರ ಸಂತೆಗಳನ್ನು ಬೆಂಗಳೂರು ಹಾಗೂ ಹುಬ್ಬಳ್ಳಿಯಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಆ) ರೈತರು ತಾವು ಬೆಳೆದ ಹಣ್ಣು ಮತ್ತು ತರಕಾರಿಗಳನ್ನು ಮಧ್ಯವರ್ತಿಗಳಿಲ್ಲದೆ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವರು ಮತ್ತು ಬೇಡಿಕೆ ಹಾಗೂ ಪೂರೈಕೆಯನ್ನು ಆಧರಿಸಿ ರೈತರನ್ನೊಳಗೊಂಡ ಸಮಿತಿಯು ಬೆಲೆಯನ್ನು ನಿರ್ಧರಿಸಲಾಗುವುದು. ರೈತರು ಮತ್ತು ಗ್ರಾಹಕರ ನೇರ ಮಾರಾಟ ಸಂಪರ್ಕ ಇರುತ್ತದೆ.

ಇ) ಅನುಕೂಲವಾಗುತ್ತದೆ.

ಬೈಲಹೊಂಗಲ ನಗರದ ಹೌಸಿಂಗ್ ಬೋರ್ಡ್ ಮನೆಗಳು

4864 - ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಮನೆ ಕಟ್ಟುವ ಸಲುವಾಗಿ ಹೌಸಿಂಗ್ ಬೋರ್ಡಿನವರು ಈ ಹಿಂದೆ ಅರ್ಜಿ ಕರೆದಿದ್ದ ಸಂಗತಿ ನಿಜವೇ ಹಾಗಿದ್ದಲ್ಲಿ ಈ ಅರ್ಜಿಯನ್ನು ಎಂದು ಕರೆಯಲಾಗಿತ್ತು? ಮತ್ತು ಅದರ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ?

ಆ) ಬೈಲಹೊಂಗಲ ನಗರದಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲದಿರುವ ಸಂಗತಿ ನಿಜವೇ?

ಇ) ಹಾಗಿದ್ದಲ್ಲಿ ಖಾಸಗಿಯವರು ಜಮೀನು ಕೊಡಲು ಮುಂದೆ ಬಂದರೂ ಸಹ ಹೌಸಿಂಗ್ ಬೋರ್ಡಿನವರು ಅತಿ ಕಡಿಮೆ ಬೆಲೆಗೆ ಜಮೀನನ್ನು ಕೇಳುತ್ತಿರುವುದರಿಂದ ಯಾರೂ ಜಮೀನು ಕೊಡಲು ಸಿದ್ದರಿಲ್ಲದಿರುವ ಸಂಗತಿ ನಿಜವೇ?

ಈ) ಹಾಗಿದ್ದಲ್ಲಿ ಮಾರ್ಕೆಟ್ ರೇಟ್ ಪ್ರಕಾರ ಜಮೀನು ಖರೀದಿ ಮಾಡಿ ಮನೆ ಕಟ್ಟಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಮನೆ ಕಟ್ಟುವ ಸಲುವಾಗಿ ಹೌಸಿಂಗ್ ಬೋರ್ಡಿನಿಂದ 1989ರಲ್ಲಿ ಬೇಡಿಕೆ ಸಮೀಕ್ಷೆಯಡಿ ಅರ್ಜಿ ಕರೆದಿದ್ದು ನಿಜ. ವಿವಿಧ ವರಮಾನದ ವರ್ಗಗಳ ಸಾರ್ವಜನಿಕರಿಂದ ಒಟ್ಟು 65 ಅರ್ಜಿಗಳು ಸ್ವೀಕೃತವಾಗಿವೆ. ಆದರೆ ಜಮೀನು ಲಭ್ಯವಿಲ್ಲದ ಕಾರಣ ಇಲ್ಲಿಯವರೆಗೆ ವಸತಿ ಯೋಜನೆಯನ್ನು ಕೈಗೊಂಡಿಲ್ಲ.

ಆ) ನಿಜ.

ಇ) ಅತಿ ದುಬಾರಿ ಬೆಲೆಗೆ ಜಮೀನು ಕೊಂಡಲ್ಲಿ ಯೋಜನೆ ನಿರ್ವಹಣೆ ಸಾಧ್ಯವಾಗುವುದಿಲ್ಲ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಖರೀದಿ ಸಮಿತಿಯ ಸಭೆಯ ಶಿಫಾರಸ್ಸಿನಂತೆ ಬೆಲೆ ನಿಗಧಿಪಡಿಸಿ ಜಮೀನು ಖರೀದಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಮೇಲಿನಂತೆ ಕ್ರಮ ಕೈಗೊಳ್ಳಲಾಗುವುದು.

ಕಂದಾಯ ಇಲಾಖೆಯ ಕಂಪ್ಯೂಟರೀಕರಣ

4865 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕಂದಾಯ ಇಲಾಖೆಯಲ್ಲಿ ರಾಜ್ಯದ ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲಿ ಕಂಪ್ಯೂಟರೀಕರಣ ಮಾಡುತ್ತಿರುವ ಸಂಗತಿ ನಿಜವೇ?

2) ಈ ಕಂಪ್ಯೂಟರೀಕರಣ ಮಾಡುವುದರಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಆರ್ಥಿಕ ಹೊರೆ ಬೀಳುವುದು?

3) ಯಾವ ಯಾವ ತಾಲ್ಲೂಕುಗಳಲ್ಲಿ ಈಗಾಗಲೇ ಕಂಪ್ಯೂಟರೀಕರಣ ಮಾಡಲು ಕ್ರಮ ಕೈಗೊಳ್ಳಲಾಗಿದೆ, ಹಾಗೂ ಅವು ಯಾವ ಹಂತದಲ್ಲಿರುತ್ತವೆ?

4) ಕಂದಾಯ ಇಲಾಖೆಯಲ್ಲಿ ಕಂಪ್ಯೂಟರೀಕರಣ ಮೂಲಕ ಸುಧಾರಣೆ ಮಾಡಲು ಸರ್ಕಾರ ಹಮ್ಮಿಕೊಳ್ಳಲಾದ ಯೋಜನೆಗಳು ಯಾವುವು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

1) ಹೌದು.

2) ಪ್ರಾರಂಭದಲ್ಲಿ ಸುಮಾರು 16 ಕೋಟಿ ರೂ.ಗಳು ವೆಚ್ಚ ಮಾಡಲಾಗಿದ್ದು, ಭೂ ದಾಖಲೆಗಳ ಗಣಕೀಕರಣ ವ್ಯವಸ್ಥೆಗಾಗಿ ಪ್ರತಿವರ್ಷ 3.00 ಕೋಟಿ ರೂ.ಗಳ ವೆಚ್ಚ ಭರಿಸಬೇಕಾಗುತ್ತದೆ.

3) ರಾಜ್ಯದ ಎಲ್ಲ 177 ತಾಲ್ಲೂಕುಗಳಲ್ಲಿ ಗಣಕ ಯಂತ್ರಗಳನ್ನು ಒದಗಿಸಲಾಗಿದೆ. ಭೂ ದಾಖಲೆಗಳ ಮಾಹಿತಿಯನ್ನು ತುಂಬಲಾಗಿದ್ದು, ಇವುಗಳನ್ನು ಎಲ್ಲೆಡೆಗಳಲ್ಲಿ ಅಪ್ ಡೇಟ್ ಮಾಡಲಾಗುತ್ತಿದೆ. ಭೂ ದಾಖಲೆಗಳ ಗಣಕೀಕರಣ ಕುರಿತ ಭೂಮಿ ಸಾಫ್ಟವೇರ್ ಕುರಿತು ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ತರಬೇತಿ ನೀಡಲಾಗುತ್ತಿದೆ.

4) ಸಚಿವಾಲಯದಲ್ಲಿ ಫೈಲ್ ಮಾನಿಟರಿಂಗ್, ಲೆಟರ್ ಮಾನಿಟರಿಂಗ್, ಎಲ್ಎ ಎಲ್ ಸಿ ಕ್ವೆಶ್ಚನ್ ಮುಂತಾದ ಸಾಫ್ಟವೇರ್ ಸಹಾಯದಿಂದ ಕಡತಗಳನ್ನು ಹಾಗೂ ಪತ್ರಗಳನ್ನು ಗಣಕ ಯಂತ್ರದ ಮೂಲಕ ಚಲಿಸಲಾಗುತ್ತಿದೆ. ಬಹುತೇಕ ಎಲ್ಲ ಸುತ್ತೋಲೆಗಳು, ಅಧಿಸೂಚನೆಗಳು, ಅಧಿನಿಯಮ ಮುಂತಾದವುಗಳನ್ನು ಗಣಕೀಕೃತಗೊಳಿಸಲಾಗಿದ್ದು, ಇವು ಕಂದಾಯ ಇಲಾಖೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತವೆ. ಗಣಕೀಕೃತ ಪಹಣಿಗಳನ್ನು ಹಂಚಲು ಭೂಮಿ ಎಂಬ ಸಾಫ್ಟವೇರ್‌ನ್ನು ಗಣಕ ಯಂತ್ರದಲ್ಲಿ ಅಳವಡಿಸಲಾಗಿದೆ.